ಅಥವಾ ಸೊಳ್ಳೆಗಳಿಂದ ಬರುವಂತಹ ಕಾಯಿಲೆಯೋ ಎನ್ನುವುದನ್ನುಪತ್ತೆ ಮಾಡಲು ಡಾಕ್ಟರ್ಸ್ ಒಂದು ಟೀಮ್ ಹೋಗಿ ಸಮೀಕ್ಷೆ ನಡೆಸಿ ಔಷಧೋಪಚಾರವನ್ನು ಕೊಟ್ಟು ಅಲ್ಲಿನ ಜನರಿಗೆ ನಂಬಿಕೆ ಬರುವಂತೆ ಕೆಲಸ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇನೆ. ನಮ್ಮ ಅಧಿಕಾರಿಗಳು ಹೋಗಿ ಬಂದ ಮೇಲೆ ಔಷಧೋಪಚಾರದ ಬಗ್ಗೆ ಎಲ್ಲಾ ಕ್ರಮ ಕೈಗೊಳ್ಳುತ್ತೇವೆ.

ಡಾ ಎಂ.ಪಿ, ಕರ್ಕಿ:- ಪ್ರಿವೆಂಟೀವ್ ಮಾಡಬಹುದಲ್ಲಾ. ಎರಡನೆಯದು ಬಾಕಿ ವೈರಸ್‌ನಲ್ಲಿ ಮಂಗ ಸಾಯುವುದಿಲ್ಲ. ಇದರಲ್ಲಿ ಮಂಗ ಸಾಯುತ್ತದೆ.

ಡಾ ಹೆಚ್. ಸಿ. ಮಹದೇವಪ್ಪ:- ಮಾನ್ಯ ಅಧ್ಯಕ್ಷರೇ, ಕೆ ಎಫ್‌ಡಿ ಅಂದರೆ ಪ್ರಾಣಿಯಿಂದ ಪ್ರಾಣಿಗೆ ಪ್ರಾಣಿಯಿಂದ ಮನಷ್ಯನಿಗೆ ಬರುವಂತಹ ಕಾಯಿಲೆ. ಮಂಗ ಸತ್ತಮೇಲೆ ಅದರ ಮೈ ಮೇಲೆ ಇರತಕ್ಕಂಥ ಟಿಕ್ಸ್ ಅರ್ಧ ಅಡಿ ಎರಡು ಅಡಿಯರೆಗೂ ಕುಪ್ಪಳಿಸಿ ಕಾಲು ಮತ್ತು ಕೈಗಳನ್ನು ಕಚ್ಚಿ ರಕ್ತದ ಮುಖಾಂತರ ದೇಹವನ್ನು ಪ್ರವೇಶಿಸಿ ಮೈ ಕೈ ನೋವು ಜ್ವರ ವಾಂತಿ ಈ ರೀತಿಯ ಸಿಮ್‌ಟಮ್ಸ್ ಅನ್ನು ಉಂಟು ಮಾಡುತ್ತದೆ.

12.10 ಪಿಎಂ

ಮಂಗಳು ಸತ್ತಿಲ್ಲದೇ ಇರತಕ್ಕಂಥ ಜ್ವರಗೇ ಬೇರೆ ಇರಬಹುದು. ಮಂಗ ಸತ್ತಿದ್ದರಿಂದ ಈ ಖಾಯಿಲೆ ಬೇರೆಯಾಗಿದೆ. 1972 ರಲ್ಲಿ ಸೊರಬ ತಾಲ್ಲೂಕಿನ ಕ್ಯಾಸನೂರಿನಲ್ಲಿ ಈ ಖಾಯಿಲೆ ಕಾಣಿಸಿಕೊಂಡಿದ್ದರಿಂದ ಇದನ್ನು ಕ್ಯಾಸನೂರ್ ಖಾಯಿಲೆಯೆಂದು ಹೇಳಲಾಗಿದೆ. ಈ ಖಾಯಿಲೆಯನ್ನು ಗುಣಪಡಿಸುವ ಔಷಧಿಯನ್ನು ತಯಾರು ಮಾಡುವ ದಕ್ಕಾಗಿಯೆ ಈ ವರ್ಷದ ಬಜೆಟ್‌ನಲ್ಲಿ 51.71. ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡಿದ್ದೇವೆ. 1992 ನೇ ಇಸವಿಯಿಂದ ಈ ಖಾಯಿಲೆಂದು ಪ್ರಕರಣಗಳು ಇಳಿಮುಖವಾಗತೊಡಗಿವೆ. ನನಗೆ ಬಂದಿರುವ ವರದಿ ಪ್ರಕಾರ ಮಂಗಳೂರು ಮತ್ತು ಕಾರವಾರ ಜಿಲ್ಲೆಗಳಲ್ಲಿ ಸುಮಾರು 75 ಪ್ರಕರಣಗಳನ್ನು ಗುರುತಿಸಿದ್ದು ಅದರಲ್ಲಿ 3 ಜನರು ಮಾತ್ರ ಸತ್ತಿದ್ದಾರೆ. ಆಮೇಲೆ ಈ ಬಗ್ಗೆ ಖುದ್ದಾಗಿ ಅಧ್ಯಯನ ಮಾಡಲು ವೈದ್ಯರ ತಂಡವನ್ನು ಕಳುಸಿಹಿಕೊಡಬೇಕೆನ್ನುವ ಮಾನ್ಯ ಸದಸ್ಯರ ಸಲಹೆಯಂತೆ ನಾನು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ವೈದ್ಯರ ತಂಡವನ್ನು ಕಳುಹಿಸುವ ಬಗ್ಗೆ ಸೂಚನೆ ಕೊಟ್ಟಿದ್ದೇನೆ.

ಮೈಸೂರು ಮಹಾನಗರ ಪಾಲಿಕೆ ಮೇಯರ್ ಹಾಗು ಉಪ ಮೇಯರ್ ಚುನಾವಣೆಗಳು

ಶ್ರೀ ಎ. ರಾಮದಾಸ್ (ಕೃಷ್ಣರಾಜ):- ಮಾನ್ಯ ಅಧ್ಯಕ್ಷರೆ, ಇದೇ ತಿಂಗಳ 26ನೇ ತಾರೀಖು ಮೈಸೂರು ಮಹಾನಗರ ಪಾಲಿಕೆ ಮೇಯರ್‌ರವರ ಮತ್ತು ಡೆಪ್ಯೂಟಿ ಮೇಯರ್‌ರವರ ಚುನಾವಣೆಯನ್ನು ಮಾಡಲು ನಿರ್ಧರಿಸಲಾಗಿದೆ. ಇದೇ 26 ನೇ ತಾರೀಖು ಮತ್ತು 27 ನೇ ತಾರೀಖು ಇದೇ ಸದನದಲ್ಲಿ ನಾವುಗಳೆಲ್ಲರೂ ಮತದಾನದಲ್ಲಿ ಭಾಗವಹಿಸಬೇಕಾಗಿರುವಂಥ ವಿಷಯ ತಮಗೂ ಗೊತ್ತಿದೆ. ಅದೇ ದಿವಸ ಅಲ್ಲೂ ಚುನಾವಣೆ ಮಾಡುತ್ತಿರುವುದರಿಂದ, ಆ ಜಿಲ್ಲೆಯ ಶಾಸಕರಾಗಿರುವ ನಮಗೆ ಮತದಾನದ ಹಕ್ಕಿನ ಪ್ರಕಾರ 'ವೋಟು ಮಾಡುವ ಸಂದರ್ಭ ಕಳೆದುಕೊಳ್ಳಬೇಕಾಗಿ ಬಂದಿದೆ'. ಆದುದರಿಂದ, ಆ ದಿವಸದ ಚುನಾವಣೆಯನ್ನು ಮುಂದೂಡ ಬೇಕೆಂದು ಮೈಸೂರು ನಗರಕ್ಕೆ ಸೇರಿರುವ ಶಾಸಕರುಗಳಾದ ನಾವು ಮನವಿ ಮಾಡಿಕೊಂಡಿದ್ದರೂ ಆ ಮನವಿಗೆ ಪುರಸ್ಕಾರ ಮಾಡಲಾಗಿಲ್ಲ. ಆಮೇಲೆ, ಸರ್ಕಾರದವರು 5 ನೇ ತಾರೀಖು ಒಂದು

ಗೆಜೆಟ್ ನೋಟಿಫಿಕೇಷನ್ ಹೊರಡಿಸಿ, ಮೊದಲನೇ ವರ್ಷದಲ್ಲಿ ಏನು ಕ್ಯಾಟಗರಿಯನ್ನು ನಿಶ್ಚಯ ಮಾಡಲಾಗಿತ್ತೋ ಬಿ. ಸಿ. ಎ. ಎಂದು ಹೇಳಿ, ಅದೇ ಕ್ಯಾಟಗರಿಗೆ ಮತ್ತೆ ಮೂರನೆ ವರ್ಷದಲ್ಲೂ ಕೂಡಾ ಮೇಯರ್ ಆಗಬೇಕೆಂದು ಗೆಜೆಟ್ ನೋಟಿಫಿಕೇಷನ್ ಹೊರಡಿಸಿರುವುದು, ಸರಿಯಲ್ಲ. ಆಮೇಲೆ ಈಗಾಗಲೇ 73 (ಎ) ಪ್ರಕಾರ ಮೇಯರ್ ಹುದ್ದೆಯನ್ನು ರೊಟೇಷನ್ ಪ್ರಕಾರ ಮಾಡಬೇಕೆಂದು ನಿಯಮವಿದ್ದರೂ, ಅದರ ವಿರುದ್ಧವಾಗಿ ಈಗ ಗೆಜೆಟ್ ನೋಟಿಫಿಕೇಷನ್ ಹೊರಡಿಸಿರುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ: ಮಾನ್ಯ ಸಭಾಧ್ಯಕ್ಷರು, ಮೈಸೂರು ಮಹಾನಗರ ಪಾಲಿಕೆ ಮೇಯರ್‌ರವರ ಅವಧಿ ಮುಗಿದಿದೆ. ಹೊಸ ಮೇಯರ್‌ರವರನ್ನು ನೇಮಕ ಮಾಡುವುದಕ್ಕಾಗಿ ಈಗಾಗಲೇ ಕಾರ್ಯಸೂಚಿಯನ್ನು ಮಾಡಿ ಕ್ಯಾಲೆಂಡರ್ ಆಫ್ ಈ ವೆಂಟ್ಸಾಪಬ್ಲಿಷ್ ಆಗಿದೆ. 26ನೇ ತಾರೀಖು ಚುನಾವಣೆ ನಡೆಯುತ್ತದೆ. ಆದುದರಿಂದ, ಚುನಾವಣೆಯನ್ನು ಮುಂದೂಡುವುದಕ್ಕಾಗುವುದಿಲ್ಲ. ಎರಡನೆಯದು ಕ್ಯಾಟಗರಿಗೆ ಸಂಬಂಧಪಟ್ಟ ಹಾಗೆ ಹೇಳಿದ್ದಾರೆ. ಗೆಜ್‌ಟ್ ನೋಟಿಫಿಕೇಷನ್ ಅನ್ನು ಕಾನೂನಿಗೆ ಬದ್ಧವಾಗಿ ಮಾಡಲಾಗಿದೆಯೆಂದು ಭಾವಿಸುತ್ತೇನೆ. ಒಂದು ಪಕ್ಷ ಈ ಕಾನೂನಿನಲ್ಲಿ ಉಲ್ಲಂಘನೆಯಾಗಿದ್ದರೆ ಅದಕ್ಕೆ ಬೇರೆ ಪರ್ಯಾಯ ಮಾರ್ಗಗಳು ಇವೆ.

ಶ್ರೀ ಎ. ರಾಮದಾಸ್:- ನಮಗೆ ಎರಡೂ ಕಡೆಯು ಮತದಾನ ಮಾಡುವ ಹಕ್ಕು ಇರುವುದರಿಂದ ನಾವು ಯಾವ ಕಡೆಯಲ್ಲಿ ಮತದಾನ ಮಾಡಬೇಕು?

ಶ್ರೀ ಇ. ಮಾರುತಿರಾವ್ ಪವಾರ್:- ಮಾನ್ಯ ಅಧ್ಯಕ್ಷರೆ, ಮೇಯರ್‌ರವರ ಚುನಾವಣೆಯಲ್ಲಿ ನಾವು ವೋಟರ್ಸ್ ಆಗಿದ್ದೇವೆ. ಎಂ.ಎಲ್.ಎ., ಮತ್ತು ಎಂ.ಎಲ್.ಸಿ., ಗಳು ಸೇರಿ ಒಟ್ಟು 7 ಜನ ಮತದಾರರಿದ್ದೇವೆ. ಈ ನಾವು 7 ಜನರೂ ಅಲ್ಲಿ ಮತದಾನ ಮಾಡದೇ ಇದ್ದರೆ ಹೇಗೆ? ನಮ್ಮ ಹಕ್ಕನ್ನು ಕಸಿಯಬೇಕೆನ್ನುವ ಉದ್ದೇಶದಿಂದ ಆದೇ ದಿವಸ ಚುನಾವಣೆ ಇಟ್ಟುಕೊಂಡಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ:- ಈಗ ಅಲ್ಲಿ ಚುನಾವಣೆ ಪ್ರಕ್ರಿಯೆ ಶುರುವಾಗಿದೆ. ಇದೇ ತಿಂಗಳ 26 ನೇ ತಾರೀಖು ಚುನಾವಣೆಯೆಂದು ನಿಗದಿ ಮಾಡಲಾಗಿದೆ. ಈ ಮನೆಯ ಸದಸ್ಯರು ಆ ಚುನಾವಣೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡುವ ಸಲುವಾಗಿ ಆ ಚುನಾವಣೆಯಲ್ಲಿ ಮುಂದೂಡಲು ಕಾನೂನು ಭಾಗದಲ್ಲಿ ಅವಕಾಶವಿಲ್ಲ.

ಶ್ರೀ ಎ. ರಾಮದಾಸ್:- 26ನೇ ತಾರೀಖು ಚುನಾವಣೆ ಇಡಬಾರದೆಂದು ನಾವು ಮೊದಲೇ ಮನವಿ ಮಾಡಿಕೊಂಡಿದ್ದರೂ ನಮ್ಮ ಮನವಿಗೆ ಪುರಸ್ಕಾರ ಕೊಟ್ಟಿಲ್ಲ. ಈಗ ತಾವು ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು:- ಅದು ನನ್ನ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ. ನನ್ನ ಅಧಿಕಾರ ಸದನ ನಡೆಸುವುದು ಮಾತ್ರ. ಅಲ್ಲಿನ ಚುನಾವಣಾ ವೇಳಾ ಪಟ್ಟಿಯನ್ನು ನಿಗದಿ ಮಾಡತಕ್ಕಂಥ ಅಧಿಕಾರ ನನಗೆ ಬರುವುದಿಲ್ಲ. ತಾವು ತಮ್ಮ ಅಹವಾಲುಗಳನ್ನು ಹೇಳಿದ್ದೀರಿ, ಅದಕ್ಕೆ ಮಂತ್ರಿಗಳು ಅವರ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ತಾವೂ ಅವರು ಸೇರಿ ಇದನ್ನು ಸೆಟಲ್ ಮಾಡಿಕೊಳ್ಳಬೇಕು. ಆಮೇಲೆ, ನೀವೂ ಅವರೂ ಕುಳಿತುಕೊಂಡು ಏನೋ ಒಂದು ಅಜಸ್ಟ್‌ಮೆಂಟ್‌ಗೆ ಬನ್ನಿ.